

بسم اللہ الرّحمٰن الرّحیم

# ಲೈಲತುಲ್ ಖದ್‌ರ್ ಮತ್ತು ಜುಮುಅತುಲ್ ವಿದಾ ಎಂಬವುಗಳ ವಾಸ್ತವಿಕತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **25-07-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ರಮಝಾನ್ ತಿಂಗಳ ಕೊನೆಯ ಹತ್ತು ದಿನಗಳು ಸಹ ವೇಗವಾಗಿ ದಾಟಿ ಹೋಗುತ್ತಾ ಇವೆ. ಈ ಕೊನೆಯ ಹತ್ತು ದಿನಗಳಲ್ಲಿ ಮುಸ್ಲಿಮರು ಎರಡು ವಿಷಯಗಳ ಬಗ್ಗೆ ಹೆಚ್ಚು ಗಮನ ಹರಿಸುತ್ತಾರೆ ಅಥವಾ ಅವುಗಳಿಗೆ ಮಹತ್ವ ನೀಡುತ್ತಾರೆ. ಅದರಲ್ಲೊಂದು **ಲೈಲತುಲ್ ಖದ್‌ರ್** ಇನ್ನೊಂದು **ಜುಮುಅತುಲ್ ವಿದಾ**. ಇವುಗಳಲ್ಲಿ **ಲೈಲತುಲ್ ಖದ್‌ರ್** ವಾಸ್ತವಿಕವಾಗಿ ಮಹತ್ವಪೂರ್ಣವಾಗಿದೆ. ಅದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸಹ ಹೇಳಿದ್ದಾರೆ. ಹದೀಸುಗಳಲ್ಲಿ ಅದರ ಬಗ್ಗೆ ಅನೇಕ ವರದಿಗಳಿವೆ. ಅದೇರೀತಿ ಪವಿತ್ರ ಖುರ್‌ಆನಿನಲ್ಲೂ ಸಹ ಅದರ ಬಗ್ಗೆ ಪ್ರಸ್ತಾಪಿಸಲಾಗಿದೆ. ಆದರೆ **'ಜುಮುಅತುಲ್ ವಿದಾ'** ಎಂಬುದು ಮುಸ್ಲಿಮರು ಅಥವಾ ಅವರ ಪಂಡಿತರು ತಮ್ಮ ಸ್ವಂತ ವ್ಯಾಖ್ಯಾನ ಪ್ರಕಾರ ತಪ್ಪಾಗಿ ರೂಪಿಸಿದುದಾಗಿದೆ. ನಾನು ಈ ದಿನ ಈ ಎರಡು ವಿಷಯಗಳ ಬಗ್ಗೆ ವಿವರಿಸುವೆನು. ಅವುಗಳ ವಾಸ್ತವಿಕತೆ ಮತ್ತು ಮಹತ್ವಗಳನ್ನು ಸಂಕ್ಷಿಪ್ತವಾಗಿ ವಿವರಿಸುವೆನು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ **ಲೈಲತುಲ್ ಖದ್‌ರ್** ಬಗ್ಗೆ ನಿಶ್ಚಿತ ದಿನಾಂಕವನ್ನು ಅಲ್ಲಾಹನು ತಿಳಿಸಿದ್ದನು. ಆ ರಾತ್ರಿ ಒಬ್ಬ ಯಥಾರ್ಥ ಸತ್ಯ ವಿಶ್ವಾಸಿಗೆ ಪ್ರಾರ್ಥನೆ ಅಂಗೀಕರಿಸಲ್ಪಡುವ ವಿಶಿಷ್ಟ ದೃಷ್ಯ ತೋರಿಸಲ್ಪಡುವುದು ಮತ್ತು ಪ್ರಾರ್ಥನೆಗಳು ಆ ರಾತ್ರಿ ಅಂಗೀಕರಿಸಲ್ಪಡುವುವು. ಹದೀಸಿನಲ್ಲಿ ಹೀಗೆ ಹೇಳಲಾಗಿದೆ– **ಲೈಲತುಲ್ ಖದ್‌ರ್**ನ ದಿನಾಂಕದ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಅಲ್ಲಾಹನು ತಿಳಿಸಿಕೊಟ್ಟಾಗ ಅವರು ಅತ್ಯಂತ ಸಂತೋಷದಿಂದ ಮನೆಯಿಂದ ಹೊರಗೆ ಬಂದು ಅದನ್ನು ಜನರಿಗೆ ತಿಳಿಸಲು ಬಯಸಿದರು. ಜನರು ಅದರಿಂದ ಲಾಭ ಪಡೆಯಲಿ ಎಂದು ಇಚ್ಛಿಸಿದರು. ಆದರೆ ಹೊರಗೆ ಬಂದಾಗ ಇಬ್ಬರು ಮುಸ್ಲಿಮರು ಪರಸ್ಪರ ಜಗಳಾಡುವುದನ್ನು ಕಂಡಾಗ ಅವರು ಅವರ ಜಗಳ ಬಿಡಿಸಲು ತೊಡಗಿದರು. ಆಗ ಅವರು **ಲೈಲತುಲ್ ಖದ್‌ರ್** ಯಾವ ದಿನಾಂಕದಂದು ಎನ್ನುವುದನ್ನು ಮರೆತು ಬಿಟ್ಟರು. ಪ್ರಾಯಶಃ ಆ ಇಬ್ಬರು ಮುಸ್ಲಿಮರ ಜಗಳವನ್ನು ನಿವಾರಿಸಲು ಪೈಗಂಬರರು(ಸ) ಬಹಳ ಸಮಯ ವಿನಿಯೋಗಿಸಿರಬಹುದೆಂದು ತೋರುತ್ತದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ತಾನು ಮನೆಯಿಂದ ಹೊರಗೆ ಬಂದುದು **ಲೈಲತುಲ್ ಖದ್‌ರ್**ನ ದಿನಾಂಕವನ್ನು ತಿಳಿಸಲು ಎಂದು ನೆನಪಿಗೆ ಬಂದಾಗ ಅವರಿಗೆ ಆ ನಿಶ್ಚಿತ ದಿನಾಂಕ ಮರೆತು ಹೋಗಿತ್ತು. ಕೆಲವು ಹದೀಸುಗಳಲ್ಲಿ ಆ ದಿನಾಂಕವನ್ನು ಮರೆಯುವಂತೆ ಮಾಡಲಾಯಿತು ಎಂದು ಸಹ ವರದಿಯಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಬರೆದಿದ್ದಾರೆ. "ಹದೀಸಿನಿಂದ ತಿಳಿಯುವುದೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಸ್ವತಃ ಮರೆತು ಬಿಟ್ಟದ್ದಲ್ಲ. ಅಲ್ಲಾಹನ ವಿಧಿ ನಿರ್ಣಯ ಪ್ರಕಾರ ಆ ದಿನಾಂಕದ ನೆನಪು ಎತ್ತಲ್ಪಡುವಂತೆ ಮಾಡಲಾಗಿತ್ತು." ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು: "ಈ ಜಗಳದ ಕಾರಣದಿಂದ ಅಥವಾ ಭಿನ್ನಾಭಿಪ್ರಾಯದ ಕಾರಣದಿಂದ **ಲೈಲತುಲ್ ಖದ್‌ರ್** ರಾತ್ರಿ ಯಾವುದೆಂಬುದರ ಬಗ್ಗೆ ನಿಶ್ಚಿತವಾದ ಜ್ಞಾನ ನಷ್ಟವಾಗಿದೆ. ಆದರೆ ರಮಝಾನ್ ತಿಂಗಳ ಕೊನೆಯ ಹತ್ತು ದಿನಗಳ ಒಂಟಿ ದಿನಾಂಕಗಳ ರಾತ್ರಿಗಳಲ್ಲಿ ಅದನ್ನು ಹುಡುಕಿರಿ".

ಈ ಘಟನೆಗೆ ಸಂಬಂಧಿಸಿ ಒಂದು ಮಹತ್ವಪೂರ್ಣವಾದ ಅಂಶವನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ವಿವರಿಸಿದ್ದಾರೆ: "**ಲೈಲತುಲ್ ಖದ್‌ರ್** ಎಂಬ ಹೆಸರು ಇರಿಸಿದುದು ಸಾಮುದಾಯಿಕ ಐಕ್ಯತೆ ಮತ್ತು ಒಮ್ಮತಕ್ಕೆ ಸಂಬಂಧಿಸಿಯಾಗಿರುತ್ತದೆ. ಇದು ಬಹಳ ದೊಡ್ಡ ಸಂಗತಿಯಾಗಿದೆ. ನಾವು ಸಾಮಾನ್ಯವಾಗಿ ಈ ಹದೀಸನ್ನು ಓದಿ ಹೀಗೆ ಹೇಳುತ್ತೇವೆ. 'ಆ ಇಬ್ಬರು ಮುಸ್ಲಿಮರು ಜಗಳ ಮಾಡದೆ ಇರುತ್ತಿದ್ದರೆ ನಮಗೆ **ಲೈಲತುಲ್ ಖದ್‌ರ್**ನ ನಿಶ್ಚಿತ ರಾತ್ರಿ ಯಾವುದೆಂದು ತಿಳಿಯುತ್ತಿತ್ತು' ಎಂದು. ಆದರೆ **ಲೈಲತುಲ್ ಖದ್‌ರ್** ಎಂಬ ಆ ನಿಗದಿತ ಸಮಯ ಸಮುದಾಯದ ಐಕ್ಯತೆಯೊಂದಿಗೆ ಸಂಬಂಧಿಸಿದೆ ಎನ್ನುವ ಮುಖ್ಯ ವಿಷಯವನ್ನು ನಾವು ಮರೆತು ಬಿಡುತ್ತೇವೆ. ಯಾವ ಸಮುದಾಯದಲ್ಲಿ ಐಕ್ಯತೆ ಮತ್ತು ಸೌಹಾರ್ದತೆ ಇಲ್ಲವೋ ಆ ಸಮುದಾಯದಿಂದ **ಲೈಲತುಲ್ ಖದ್‌ರ್** ಸಹ ಎತ್ತಲ್ಪಡುತ್ತದೆ".

ನಾವು ಅತ್ಯಂತ ಖೇದಪೂರ್ವಕವಾಗಿ ಹೇಳಲು ಬಯಸುತ್ತೇವೆ. ಬಹುತೇಕ ಮುಸ್ಲಿಮ್ ದೇಶಗಳಲ್ಲಿ ದುರದೃಷ್ಟವಶಾತ್ ಇಂದು ಐಕ್ಯತೆ ಇಲ್ಲದಾಗಿದೆ. ಪ್ರಜೆಗಳು ಪ್ರಜೆಗಳೊಂದಿಗೆ ಹೋರಾಡುತ್ತಾರೆ. ಪ್ರಜೆಗಳು ಸರಕಾರದ ವಿರುದ್ಧ ಸಹ ಹೋರಾಡುತ್ತಾರೆ. ಸರಕಾರ ಪ್ರಜೆಗಳ ಮೇಲೆ ದೌರ್ಜನ್ಯ ಮಾಡಿತ್ತಿದೆ. ಮುಸ್ಲಿಮ್ ದೇಶಗಳಲ್ಲಿ ಐಕ್ಯತೆ ಇಲ್ಲವಾಗಿದೆ ಮಾತ್ರವಲ್ಲ ದೌರ್ಜನ್ಯ ಸಹ ನಡೆಯುತ್ತಿದೆ. ದೌರ್ಜನ್ಯವನ್ನು ಮತ್ತಷ್ಟು ಹೆಚ್ಚಿಸಲಾಗುತ್ತಿದೆ. ಮುಸ್ಲಿಮ್ ದೇಶಗಳ ಈ ಅನೈಕತೆಯ ಕಾರಣ ಅನ್ಯರು ಮುಸ್ಲಿಮರ ವಿರುದ್ಧ ತಮಗೆ ಇಷ್ಟ ಬಂದಂತೆ ವರ್ತಿಸಲು ಧೈರ್ಯ ತೋರಿಸುತ್ತಾರೆ. ಇದೇ ಕಾರಣದಿಂದ ಇಸ್ರಾಯೇಲ್ ದೇಶ ನಿರಪರಾಧಿ ಪಾಲೆಸ್ತೀನಿಯರನ್ನು ದೌರ್ಜನ್ಯ ಭರಿತವಾಗಿ ಕೊಲ್ಲುತ್ತಾ ಇದೆ. ಮುಸ್ಲಿಮರಲ್ಲಿ ಸೌಹಾರ್ದತೆ ಮತ್ತು ಐಕ್ಯತೆ ಇರುತ್ತಿದ್ದರೆ, ಅಲ್ಲಾಹನು ತೋರಿಸಿದ ಮಾರ್ಗದಲ್ಲಿ ನಡೆಯುವವರಾಗಿದ್ದರೆ ಮುಸ್ಲಿಮ್ ದೇಶಗಳಲ್ಲಿ ಎಂತಹ ಶಕ್ತಿ ಇದೆ ಎಂದರೆ ಇಂತಹ ದೌರ್ಜನ್ಯ ಸಂಭವಿಸುತ್ತಲೇ ಇರಲಿಲ್ಲ. ಯುದ್ಧಗಳಿಗೆ ಸಹ ಕೆಲವು ನಿಯಮಗಳಿರುತ್ತವೆ. ಇಸ್ರಾಯೇಲ್ ವಿರುದ್ಧ ಹೋಲಿಸಿದರೆ ಪಾಲೆಸ್ತೀನಿಯರಿಗೆ ಯಾವುದೇ ಶಕ್ತಿ ಇಲ್ಲ. ಹಮಾಸ್ ಗುಂಪಿನವರು ದೌರ್ಜನ್ಯ ಮಾಡುತ್ತಿದ್ದಾರೆ ಎಂದು ಹೇಳುವುದಾದರೆ, ಮುಸ್ಲಿಮ್ ದೇಶಗಳು ಅವರನ್ನು ತಡೆಯಬೇಕು. ಆದರೆ

ಹಮಾಸ್ ಮತ್ತು ಇಸ್ರಾಯೇಲ್ ಮಾಡುವ ದೌರ್ಜನ್ಯಗಳನ್ನು ಹೇಗೆ ಹೋಲಿಸಬಹುದೆಂದರೆ, ಒಬ್ಬ ವ್ಯಕ್ತಿ ಒಂದು ದೊಣ್ಣೆಯಿಂದ ಆಕ್ರಮಣ ಮಾಡುವಾಗ ಅದಕ್ಕೆ ಎದುರಾಗಿ ಒಂದು ಸೈನ್ಯವೇ ಗುಂಡು ಹಾರಿಸಿ ದೌರ್ಜನ್ಯ ಮಾಡುತ್ತಿದೆ. ಮುಸ್ಲಿಮ್ ದೇಶಗಳಲ್ಲಿ ತುರ್ಕಿ ದೇಶ ಈ ದೌರ್ಜನ್ಯದ ಬಗ್ಗೆ ಶೋಕ ದಿನವನ್ನು ಆಚರಿಸಿ ತನ್ನ ಜವಾಬ್ದಾರಿ ನಿರ್ವಹಿಸಿತು!

ಪಾಶ್ಚಿಮಾತ್ಯ ದೇಶಗಳು ಸಹ ಈ ದೌರ್ಜನ್ಯಕ್ಕೆ ಸಂಬಂಧಿಸಿ ತಮ್ಮ ಹೊಣೆಗಾರಿಕೆ ನಿರ್ವಹಿಸುತ್ತಾ ಇಲ್ಲ. ಅವರು ಎರಡು ವಿಭಾಗಗಳನ್ನೂ ಬಲಯುತವಾಗಿ ತಡೆಯಬೇಕಾಗಿತ್ತು. ನಮಗೆ ದುಆ ಮಾತ್ರ ಮಾಡಲು ಸಾಧ್ಯ. ಅಲ್ಲಾಹನು ನಿರಪರಾಧಿಗಳಾದ ದೌರ್ಜನ್ಯ ಪೀಡಿತರನ್ನು ರಕ್ಷಿಸುವವನಾಗಲಿ ಮತ್ತು ಶಾಂತಿ ಸ್ಥಾಪಿತವಾಗಲಿ. ಇದೇ ರೀತಿ ಮುಸ್ಲಿಮ್ ದೇಶಗಳಲ್ಲಿ ಆಂತರಿಕ ಜಗಳ ಮತ್ತು ದೌರ್ಜನ್ಯ ಸಹ ನಡೆಯುತ್ತಿದೆ. ಅಲ್ಲಾಹನು ಅವರಿಗೆ ಬುದ್ಧಿ ನೀಡಲಿ. ಕಲಿಮ ಪಠಿಸುವ ಮುಸ್ಲಿಮರು ಪರಸ್ಪರ ರಕ್ತಪಾತ ಮಾಡದಿರಲಿ. ಪರಸ್ಪರ ಐಕ್ಯತೆ ಮತ್ತು ಸೌಹಾರ್ದ ಉಂಟಾಗಲಿ. ಹೀಗೆ ಆಗದಿದ್ದರೆ ಅವರು ಆರಾಧನೆಯನ್ನು ಸರಿಯಾಗಿ ಮಾಡಿದಂತಾಗುವುದಿಲ್ಲ. **ಲೈಲತುಲ್ ಖದ್ರ್** ನಮಗೆ ಲಭಿಸಲಿ ಎಂಬ ಅವರ ಅಭಿಲಾಷೆ ಸಹ ಈಡೇರಲಾರದು. ಏಕೆಂದರೆ ಸಮುದಾಯದಲ್ಲಿ ಐಕ್ಯತೆ ನಷ್ಟವಾದರೆ ಅಲ್ಲಾಹನು **ಲೈಲತುಲ್ ಖದ್ರ**ನ್ನು ಸಹ ಎತ್ತಿಬಿಡುತ್ತಾನೆ. ಕೇವಲ ರಾತ್ರಿಗಳು ಮತ್ತು ಅಂಧಕಾರ ಮಾತ್ರ ಬಾಕಿಯಾಗಿ ಉಳಿಯುತ್ತವೆ. ಅಭಿವೃದ್ಧಿ ನಿಂತು ಹೋಗುತ್ತದೆ.

**ಲೈಲತುಲ್ ಖದ್ರ್** ಎಂದರೆ ಮನುಷ್ಯನ ಅದೃಷ್ಟವನ್ನು ಅಂದಾಜು ಮಾಡುವ ರಾತ್ರಿ ಎಂದು ಅರ್ಥ. ಮುಂದಿನ ವರ್ಷ ಅವನೊಂದಿಗೆ ಹೇಗೆ ವರ್ತಿಸಲಾಗುವುದು. ಅವನು ಎಷ್ಟು ಅಭಿವೃದ್ಧಿ ಗಳಿಸುವನು. ಅವನಿಗೆ ಏನೆಲ್ಲಾ ಒಳಿತುಗಳು ಸಿಗುವುವು. ಯಾವುದೆಲ್ಲಾ ಹಾನಿ ಸಂಭವಿಸುವುದು ಎಂದೆಲ್ಲಾ ನಿರ್ಧರಿಸಲ್ಪಡುತ್ತವೆ. ಮನುಷ್ಯನ ಅಭಿವೃದ್ಧಿಗೆ ಸಂಬಂಧಪಟ್ಟ ಎಲ್ಲಾ ನಿರ್ಧಾರಗಳು ಅಂಧಕಾರದಲ್ಲಿಯೇ ನಿರ್ಧರಿಸಲ್ಪಡುತ್ತವೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿರುವರು: ಒಬ್ಬ ಮನುಷ್ಯ ಅಲ್ಲಾಹನಿಗೆ ಎಷ್ಟು ಪ್ರಿಯನಾಗುತ್ತಾನೋ ಅದೇ ಪ್ರಮಾಣದಲ್ಲಿ ಅವನು ಪರೀಕ್ಷೆಗಳಿಗೆ ಪಾತ್ರನಾಗುತ್ತಾನೆ ಎಂದು. ಆದುದರಿಂದ ನಾವು ನೆನಪಿನಲ್ಲಿಡಬೇಕು, ನಾವು ಸಹ ಕೆಲವು ಸ್ಥಳಗಳಲ್ಲಿ ಪರೀಕ್ಷೆಗಳಿಗೆ ಪಾತ್ರರಾಗುತ್ತಿದ್ದೇವೆ. ಇದು ನಮಗೆ **ಲೈಲತುಲ್ ಖದ್ರ್** ಆಗಿದೆ. ಈ ಪರೀಕ್ಷೆಯ ಕಾರಣದಿಂದ ಯಥಾರ್ಥ **ಲೈಲತುಲ್ ಖದ್ರ್**ನ ಹುಡುಕುವಿಕೆ ಸಹ ಅಷ್ಟೇ ತೀವ್ರವಾಗಿ ನಡೆಯುತ್ತಿದೆ. ಆಗ ದುಆಗಳ ಕಡೆಗೆ ಗಮನ ಉಂಟಾಗುತ್ತದೆ. ಮನುಷ್ಯನು ಅಲ್ಲಾಹನ ಕಡೆಗೆ ವಿಶಿಷ್ಟವಾಗಿ ಬಾಗುವುದು ಕಷ್ಟ ಸಂಭವಿಸುವಾಗ ಆಗಿದೆ. ಆಗ ತರಬೇತಿ ಮತ್ತು ವಿಜಯದ ಕಾಲ ಲಭಿಸುತ್ತದೆ. ಆದರೆ ನಾವು ನಮ್ಮ ಐಕ್ಯತೆಯ ಮಟ್ಟವನ್ನು ನಷ್ಟ ಪಡಿಸಿದರೆ **ಲೈಲತುಲ್ ಖದ್ರ್**ನಿಂದ ಸರಿಯಾದ ಲಾಭ ಪಡೆಯಲು ಸಾಧ್ಯವಿಲ್ಲ. ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕಾಗಿ ನಾವು ನಮ್ಮ ತ್ಯಾಗಗಳನ್ನು ಮುಂದುವರಿಸುತ್ತಾ ಹೋದರೆ ನಾವು ಜಯವನ್ನು ಗಳಿಸುತ್ತಾ ಹೋಗುವೆವು. ಹಾಗೆ ನಾವು ಜಯಗಳಿಸುತ್ತಾ ಹೊಸ ಜೀವನವನ್ನು ಪಡೆಯುವವರಾಗುವೆವು. ನಾವು ಒಂದು ಹೊಸ ವರ್ಣವನ್ನು ಗಳಿಸಿ ಮೇಲೇಳುವೆವು. ಆದುದರಿಂದ ಅಲ್ಲಾಹನ ಪ್ರೀತಿ ಗಳಿಸಲು ಪರಸ್ಪರ ಐಕ್ಯತೆಯನ್ನು ಕಾಪಾಡಿರಿ. ಹಾಗೆ ಮಾಡಿದರೆ إِنْ شَاءَ اللهُ ಅಭಿವೃದ್ಧಿಯ ಹೊಸ ಮಜಲುಗಳನ್ನು ನಾವು ಕಾಣುವವರಾಗುವೆವು.

**ಲೈಲತುಲ್ ಖದ್ರ್**ನಿಂದ ಲಾಭ ಪಡೆಯಲು ನಾವು ಮೇಲೆ ವಿವರಿಸಿದವುಗಳನ್ನು ಯಾವಾಗಲೂ ಗಮನದಲ್ಲಿರಿಸಬೇಕು. **ಲೈಲತುಲ್ ಖದ್ರ್** ಎಂದರೆ ನಮ್ಮ ಬಲಿದಾನಗಳು ಅಲ್ಲಾಹನಿಂದ ಅಂಗೀಕರಿಸಲ್ಪಡುವ ಸಮಯವಾಗಿದೆ. ಅಲ್ಲಾಹನಿಂದ ಅಂಗೀಕಾರ ಪಡೆಯುವುದಕ್ಕಿಂತ ಹೆಚ್ಚು ಲಾಭಕರವಾದ ವ್ಯಾಪಾರ ಮತ್ತೊಂದಿಲ್ಲ. ಆದುದರಿಂದ ನಾವು ಅಲ್ಲಾಹನ ಅಂಗೀಕಾರ ಗಳಿಸುವ ತ್ಯಾಗಗಳನ್ನು ಮಾಡಲು ಪ್ರಯತ್ನಿಸಬೇಕಾಗಿದೆ.

ಇಸ್ಲಾಮೀ ಯುದ್ಧಗಳಲ್ಲಿ, ಉದಾಹರಣೆಗೆ **ಬದ್ರ್** ಯುದ್ಧದಲ್ಲಿ ಮುಸ್ಲಿಮರೂ ಕೊಲ್ಲಲ್ಪಟ್ಟರು, ಅವಿಶ್ವಾಸಿಗಳೂ ಕೊಲ್ಲಲ್ಪಟ್ಟರು. ಆದರೆ ಅವಿಶ್ವಾಸಿಗಳು ಕೊಲ್ಲಲ್ಪಟ್ಟದ್ದು, ಅವರ **ಲೈಲತುಲ್ ಖದ್ರ್** ಆಗಿರಲಿಲ್ಲ. ಆದರೆ ಮುಸ್ಲಿಮರು ಶಹೀದರಾದುದು **ಲೈಲತುಲ್ ಖದ್ರ್** ಆಗಿತ್ತು. ಏಕೆಂದರೆ ಅಲ್ಲಾಹನು ಅವರ ಬಲಿದಾನಗಳನ್ನು ಅಂಗೀಕರಿಸಿರುವನು. ಆದುದರಿಂದ ನಾವು ಒಂದು ತತ್ವ ನೆನಪಿಡಬೇಕು ಯಾವ ಯಾತನೆಗಳಿಗೆ ಅಲ್ಲಾಹನು ಬೆಲೆಕೊಡುವುದಿಲ್ಲವೋ ಅದು **ಲೈಲತುಲ್ ಖದ್ರ್** ಅಲ್ಲ. ಅದೊಂದು ಶಿಕ್ಷೆ ಆಗಿದೆ. ಆದರೆ ಅಲ್ಲಾಹನು ಬೆಲೆಗೊಡುವ ಕಷ್ಟಗಳು **ಲೈಲತುಲ್ ಖದ್ರ್** ಆಗಿದೆ.

ಕೆಲವು ದೇಶಗಳಲ್ಲಿ ಅಹ್ಮದಿಯರ ವಿರುದ್ಧ ಕಠಿಣ ಪರಿಸ್ಥಿತಿ ಇದೆ. ಈ ಕಷ್ಟದ ಪರಿಸ್ಥಿತಿಯು ಬೆಳಗಾತದ ಉದಯದ ಶುಭವಾರ್ತೆಯನ್ನು ನೀಡುತ್ತದೆ. ಅಲ್ಲಿನ ಈ **ಲೈಲತುಲ್ ಖದ್ರ್**ನ ಕಾರಣ ಲೋಕದ ವಿವಿಧ ದೇಶಗಳಲ್ಲಿ, ವಿವಿಧ ನಗರಗಳಲ್ಲಿ, ಅಹ್ಮದಿಯತ್ತಿನ ಮಕ್ಕಳ ಜನನ ಉಂಟಾಗುತ್ತಿದೆ. ಹೊಸ ಹೊಸ ಜಮಾಅತ್‌ಗಳು ಸ್ಥಾಪಿತವಾಗುತ್ತಾ ಇವೆ. ಇದರಿಂದ ಇನ್ನಷ್ಟು ಅನುಗ್ರಹ ಪಡೆಯಲು, **ಲೈಲತುಲ್ ಖದ್ರ್**ನಿಂದ ಹೆಚ್ಚು ಅನುಗ್ರಹ ಗಳಿಸಲು ನಮ್ಮ ಪೈಕಿ ಪ್ರತಿಯೊಬ್ಬರೂ ಹೀಗೆ ಪ್ರತಿಜ್ಞೆ ಮಾಡಬೇಕು. ನಾವು ಮೊದಲಿಗಿಂತ ಹೆಚ್ಚಾಗಿ ಐಕ್ಯತೆಯಿಂದ ಇರುವೆವು. ಹಾಗೂ ಐಕ್ಯತೆಯಲ್ಲಿ ಏನಾದರೂ ಬಿರುಕು ಉಂಟಾದರೆ ನಾವು ಕೂಡಲೇ ಅದನ್ನು ಸರಿಪಡಿಸುವೆವು – ಎಂದು. ಪವಿತ್ರ ಖುರ್‌ಆನ್ ಸತ್ಯವಿಶ್ವಾಸಿಗಳ ಬಗ್ಗೆ **“ರುಹಮಾಉ ಬೈನಹುಮ್”** ಅವರು ಪರಸ್ಪರ ಕರುಣೆ ದೋರುತ್ತಾರೆ ಎಂದು ಹೇಳಿದೆ. ನಾವು ಅದರ ಮಾದರಿಯಾಗಿ ವರ್ತಿಸುತ್ತಾ **ಲೈಲತುಲ್ ಖದ್ರ್**ನಿಂದ ವಾಸ್ತವಿಕ ಅನುಗ್ರಹಗಳನ್ನು ಗಳಿಸುವವರಾಗಬೇಕು.

ನಾವು ಈ ರಮಝಾನ್‌ನಲ್ಲಿ ನಮ್ಮ ವೈಯಕ್ತಿಕ ವಿರೋಧಗಳನ್ನು ಸಹ ಕೊನೆಗೊಳಿಸಲು ಪ್ರಯತ್ನಿಸಬೇಕಾಗಿದೆ. ಆ ಮೂಲಕ ನಾವು **ಲೈಲತುಲ್ ಖದ್ರ್**ನಿಂದ ವೈಯಕ್ತಿಕವಾಗಿಯೂ ಅನುಗ್ರಹ ಗಳಿಸುವವರಾಗಬೇಕು. **ಲೈಲತುಲ್ ಖದ್ರ್**ಗೆ ಸಂಬಂಧಿಸಿದ ಏನೆಲ್ಲಾ ಫಲಗಳು, ವಿಜಯಗಳು ಮತ್ತು ಅಭಿವೃದ್ಧಿಗಳು ಅಲ್ಲಾಹನಿಂದ ಜಮಾಅತ್‌ಗೆ ವಿಧಿಸಲ್ಪಟ್ಟಿವೆಯೋ ಅವುಗಳಿಂದ ನಾವು ವೈಯಕ್ತಿಕವಾಗಿ ಸಹ ಪಾಲು ಪಡೆಯುವವರಾಗಬೇಕು. ನಾವು ನೆನಪಿಡಬೇಕಾದುದೇನೆಂದರೆ ಅಲ್ಲಾಹನ ಅನುಗ್ರಹಗಳ ವರ್ಷಧಾರೆಯು ವರ್ಧಿಸುತ್ತಾ ಹೋದಂತೆ ಅಷ್ಟೇ ವೇಗವಾಗಿ ಶತ್ರುಗಳು ನಮಗೆ ತಡೆಗಳನ್ನು ಒಡ್ಡುವುದು ಮತ್ತು ಕಷ್ಟ ನೀಡುವುದು ಸಹ ವರ್ಧಿಸುತ್ತದೆ. ಅವರು

ನಮ್ಮನ್ನು ಪರೀಕ್ಷೆಗಳಿಗೆ ಗುರಿಪಡಿಸಲು ಪ್ರಯತ್ನಿಸುತ್ತಾರೆ. ಇವೆಲ್ಲಾ ಕೆಲವೇ ದೇಶಗಳಲ್ಲಿ ಮಾತ್ರ ನಡೆಯುತ್ತಿವೆ ಎಂದು ಭಾವಿಸಬಾರದು. ಅಸೂಯೆಯ ಬೆಂಕಿ ಜಮಾಅತಿನ ಅಭಿವೃದ್ಧಿಯನ್ನು ತಡೆಯಲು ಪೂರ್ಣ ಪ್ರಯತ್ನ ಮಾಡುತ್ತಿದೆ. ಪ್ರತಿಯೊಂದು ಸ್ಥಳದಲ್ಲಿ ಹೀಗೆ ಶತ್ರುಗಳು ಮಾಡುವರು. ಆದರೆ **ಲೈಲತುಲ್ ಖದ್‌ರ್** ಬಗ್ಗೆ ಇರುವ ಶುಭವಾರ್ತೆ ಶತ್ರುಗಳ ಈ ಪ್ರಯತ್ನಗಳ ಕೆಟ್ಟ ಪರಿಣಾಮಗಳಿಂದ ನಾವು ರಕ್ಷಿಸಲ್ಪಡುವ, ಮತ್ತು ಜಮಾಅತಿನ ಅಭಿವೃದ್ಧಿ ಬಗ್ಗೆ ಮಾಡಲಾದ ಪ್ರಾರ್ಥನೆಗಳ ಅಂಗೀಕಾರದ ಸೂಚನೆಗಳನ್ನು ಸಹ ನಮಗೆ ನೀಡುತ್ತದೆ.

ಒಟ್ಟಿನಲ್ಲಿ, ನಾವು ನಮ್ಮ ಸ್ಥಿತಿಯನ್ನು ಅಲ್ಲಾಹನ ಇಷ್ಟಕ್ಕೆ ಅನುಸಾರವಾಗಿ ಪರಿವರ್ತಿಸಲು ಪ್ರಯತ್ನ ಮಾಡುತ್ತಾ ಮುಂದುವರಿದರೆ ನಾವು **ಲೈಲತುಲ್ ಖದ್‌ರ್**‌ನಿಂದ ಅನುಗ್ರಹಗಳನ್ನು ಸಹ ಗಳಿಸುವೆವು. ಸತ್ಯವಿಶ್ವಾಸಿಗಳ ಉದ್ದೇಶಲಕ್ಷ್ಯ ಮತ್ತು ಪ್ರಯತ್ನ ಜಮಾಅತಿನ ಅಭಿವೃದ್ಧಿಯನ್ನು ಉನ್ನತ ಮಟ್ಟದಲ್ಲಿ ನೋಡುವುದಾಗಿದೆ. ಅದು ಅತ್ಯುನ್ನತಿಯನ್ನು ಪಡೆಯುವ ಬಗ್ಗೆ ಅಲ್ಲಾಹನು ವಾಗ್ದಾನ ನೀಡಿರುವನು. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸಂಬಂಧ ಜೋಡಿಸಿದವರಾದುದರಿಂದ ನಾವು ಈ ಅಭಿವೃದ್ಧಿಯಲ್ಲಿ ಪಾಲುಗಾರರಾಗಲು ಪ್ರಯತ್ನಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇದಕ್ಕೆ ಸಂಬಂಧಿಸಿ ಹೇಳಿರುವುದೇನೆಂದರೆ– ತನ್ನ ಆಗಮನದ ಉದ್ದೇಶ ಒಂದನೆಯದಾಗಿ ದಾಸನನ್ನು ದೇವನೊಂದಿಗೆ ಸಂಬಂಧ ಸ್ಥಾಪಿಸುವಂತೆ ಮಾಡುವುದು. ಎರಡನೆಯದು ಮನುಷ್ಯನು ಇನ್ನೊಬ್ಬ ಮನುಷ್ಯನ ಹಕ್ಕುಗಳನ್ನು ಈಡೇರಿಸಿಕೊಡುವಂತೆ ಮಾಡುವುದಾಗಿದೆ. ಈ ಎರಡು ಕರ್ತವ್ಯಗಳನ್ನು ನಾವು ನಿರ್ವಹಿಸಬೇಕಾಗಿದೆ. ಅದಕ್ಕಾಗಿ ನಾವು ನಮ್ಮ ಆರಾಧನೆಗಳ ಮಟ್ಟವನ್ನು ಉನ್ನತಗೊಳಿಸಬೇಕು. ಭಿನ್ನಾಭಿಪ್ರಾಯಗಳನ್ನೂ ಜಗಳಗಳನ್ನೂ ನಿವಾರಿಸಿ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸುವವರಾಗಬೇಕು. ಹಕ್ಕುಗಳನ್ನು ಈಡೇರಿಸಿಕೊಡುತ್ತಿರುವಾಗ ವಿರೋಧ ಮತ್ತು ಭಿನ್ನಾಭಿಪ್ರಾಯಗಳು ತಲೆದೋರಲು ಸಾಧ್ಯವೇ ಇಲ್ಲ.

ಈ ತತ್ವವನ್ನು ಮನವರಿಕೆ ಮಾಡಿಕೊಂಡು ವರ್ತಿಸಿದರೆ ನಾವು **ಲೈಲತುಲ್ ಖದ್‌ರ್** ಬಗ್ಗೆ ವಾಸ್ತವಿಕವಾಗಿ ಅರಿತುಕೊಳ್ಳುವವರಾಗುವೆವು ಮತ್ತು ಅದರ ಅನುಗ್ರಹಗಳನ್ನು ಗಳಿಸುವವರಾಗುವೆವು. **ಲೈಲತುಲ್ ಖದ್‌ರ್** ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವುದು: "**ಲೈಲತುಲ್ ಖದ್‌ರ್** ಮನುಷ್ಯನಿಗೆ ಅವನ ಅತ್ಯಂತ ಪರಿಶುದ್ಧ ಸಮಯವಾಗಿದೆ" ಎಂದು. ನಮ್ಮ ಜೀವಿತವನ್ನು ಪರಿಶುದ್ಧಗೊಳಿಸಲು ನಾವು ಅಂತಹ **ಲೈಲತುಲ್ ಖದ್‌ರ್** ಪಡೆಯಲು ಪ್ರಯತ್ನಿಸಬೇಕಾಗಿದೆ. ನಾವು ನಮ್ಮ ಜೀವಿತವನ್ನು ಪರಿಶುದ್ಧಗೊಳಿಸುವವರಾಗುವಾಗ ಮಾತ್ರ ನಾವು ವಾಸ್ತವಿಕ **ಲೈಲತುಲ್ ಖದ್‌ರ್** ಗಳಿಸಿದವರಾಗುವೆವು.

ಇನ್ನೊಂದು ವಿಷಯ '**ಜುಮುಅತುಲ್ ವಿದಾ**' ಆಗಿದೆ. ಇದರ ಬಗ್ಗೆ ಸಹ ಬಹಳ ವಿಚಿತ್ರ ಕಲ್ಪನೆಗಳನ್ನು ಮಾಡಲಾಗಿದೆ. ನಮ್ಮ ಮೇಲೆ ಅಲ್ಲಾಹನ ಅಪಾರವಾದ ಔದಾರ್ಯವೇನೆಂದರೆ, ಈ ಕಾಲಘಟ್ಟದ ಇಮಾಮರನ್ನು ನಂಬುವ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಿದ್ದಾನೆ ಮತ್ತು ಆ ಮೂಲಕ ನಮ್ಮನ್ನು ತಪ್ಪು ವಿಶ್ವಾಸಗಳಿಂದ ರಕ್ಷಿಸಿದ್ದಾನೆ ಎಂಬುದು. ಪ್ರತಿಯೊಬ್ಬ ಅಹ್ಮದಿ ಈರೀತಿಯ ತಪ್ಪು ನಂಬಿಕೆಗಳಿಂದ ಮುಕ್ತನಾಗಬೇಕು. ಇಲ್ಲವಾದರೆ ಅಹ್ಮದಿಯಾಗುವುದರಿಂದ ಏನೂ ಪ್ರಯೋಜನವಿಲ್ಲ. ಬಹುತೇಕ ಅಹ್ಮದಿಯೇತರರ ನಂಬಿಕೆ ಏನೆಂದರೆ ರಮಝಾನಿನ ಕೊನೆಯ ಜುಮುಅದ ನಮಾಝ್ ಮಾಡಿದರೆ ಉದ್ದೇಶಪೂರ್ವಕವಾಗಿ ಬಿಟ್ಟು ಬಿಟ್ಟ ನಮಾಝ್‌ಗಳು ಸಹ ಕ್ಷಮಿಸಲ್ಪಡುತ್ತವೆ ಎಂದಾಗಿದೆ. ಎಂದರೆ ಈ ದಿನ ಜುಮುಅ ಖುತುಬ ಆಲಿಸಿ ಎರಡು ರಕಅತ್ ನಮಾಝ್ ಮಾಡಿದರೆ ಇದರ ಮೊದಲು ಮಾಡಿದ ಎಲ್ಲಾ ಕೆಟ್ಟ ಕೆಲಸಗಳು ಕ್ಷಮಿಸಲ್ಪಡುತ್ತವೆ ಎಂದು. ರಮಝಾನಿನ ಕಾಲದಲ್ಲಿ ಅಲ್ಲಾಹನಿಂದ ದೊರಕುವ ಎಲ್ಲಾ ಅನುಗ್ರಹಗಳು ಈ ಒಂದು ನಮಾಝ್ ಅನುಷ್ಠಿಸುವ ಮೂಲಕ ದೊರಕುತ್ತದೆ ಎಂಬುದು ಅವರ ಭಾವನೆಯಾಗಿದೆ.

ನೀವು ಯಾವಾಗಲೂ ನೆಪಿನಲ್ಲಿಡಿರಿ. ಈ ಜುಮುಅ ಬಂದುದು ನಾವು ಈ ದಿನ ನಮಾಝ್ ಮಾಡಿ ರಮಝಾನಿಗೆ ವಿದಾಯ ಹೇಳಲು ಅಲ್ಲ. ಬದಲಾಗಿ ಅದು ಬಂದಿರುವುದು, ನಾವು ಬಯಸುವುದಾದರೆ ಈ ಜುಮುಅದ ಲಾಭ ಪಡೆದು ಅದನ್ನು ಯಾವಾಗಲೂ ನಮ್ಮ ಹೃದಯದಲ್ಲಿ ಸ್ಥಾಪಿಸಿಡಲಿಕ್ಕಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಜುಮುಅವನ್ನು ಮುಸ್ಲಿಮರಿಗೆ ಈದ್‌ಗಳಲ್ಲಿ ಒಂದು ಈದ್ ಎಂದು ಹೇಳಿದ್ದಾರೆ. ಹದೀಸಿನಲ್ಲಿ ವರದಿಯಾದ ಪ್ರಕಾರ ಜುಮುಅಗಳ ಸಮಯದಲ್ಲಿ ಎಂತಹ ಒಂದು ಕಾಲ ಇರುತ್ತದೆ ಎಂದರೆ ಆಗ ಮಾಡಿದ ದುಆಗಳು ಅಂಗೀಕರಿಸಲ್ಪಡುತ್ತವೆ. ನಾವು ಅದರ ಲಾಭ ಪಡೆಯುವವರಾಗಬೇಕು. ನಾವು ಈ ದಿನ ಮಸ್‌ಜಿದ್‌ಗೆ ಬಂದುದು "ಓ ಅಲ್ಲಾಹ್ ನೀನು ರಮಝಾನ್ ಮೂಲಕ ನಮ್ಮ ಮೇಲೆ ಹೇರಿದ ಕಷ್ಟಗಳು ಇಂದು ಮುಕ್ತಾಯವಾಗುತ್ತದೆ" ಎಂದು ಹೇಳಲಿಕ್ಕಾಗಿ ಅಲ್ಲ. ಬದಲಾಗಿ ನಾವು ಬಂದುದು ಹೀಗೆ ಪ್ರಾರ್ಥಿಸಲಿಕ್ಕಾಗಿದೆ– "ರಮಝಾನ್ ಮೂರು ನಾಲ್ಕು ದಿನಗಳಲ್ಲಿ ಮುಕ್ತಾಯವಾಗಲಿದೆ. ಓ ಅಲ್ಲಾಹ್ ನೀನು ರಮಝಾನಿನ ವಾಸ್ತವಿಕತೆಯನ್ನು ಮತ್ತು ಅದರಲ್ಲಿ ನಾವು ಮಾಡಿದ ಆರಾಧನೆಗಳನ್ನು ಮತ್ತು ಇತರ ಸತ್ಕರ್ಮಗಳನ್ನು ನಮ್ಮ ಹೃದಯಗಳಲ್ಲಿ ನೀನು ಸ್ಥಿರವಾಗಿ ಸಂರಕ್ಷಿಸು. ಅವು ನಮ್ಮಿಂದ ಎಂದೂ ಅಗಲಿ ಹೋಗದಿರಲಿ" ಎಂದು ಪ್ರಾರ್ಥಿಸಲಿಕ್ಕಾಗಿದೆ.

ಈ ರೀತಿ ನಾವು ಈ ದಿನದ ಜುಮುಅವನ್ನು ವಿವರಿಸುವುದಾದರೆ ಮತ್ತು ಇಂದಿನ ಜುಮುಅದಿಂದ ಅನುಗ್ರಹ ಪಡೆಯುವುದಾದರೆ ಇಂದಿನ ಜುಮುಅ ಅನುಗ್ರಹಕರವಾಗುವುದು. ಆದರೆ ಮೂರು ನಾಲ್ಕು ದಿನಗಳ ನಂತರ ರಮಝಾನ್ ನಮ್ಮಿಂದ ದೂರಸರಿದು ಹೋದ ಬಳಿಕ ನಾವು ಮಾಡಿದ ಸತ್ಕರ್ಮಗಳನ್ನು ನಾವು ಮರೆತುಬಿಡುವುದಾದರೆ ಅದು ಬಹಳ ದೊಡ್ಡ ದುರದೃಷ್ಟವಾಗುವುದು. ಲೋಕದಲ್ಲಿ ಮಗ ತಂದೆಯಿಂದ, ತಾಯಿ ಮಗನಿಂದ, ಸಹೋದರ ಸಹೋದರನಿಂದ ಅಗಲಿ ದೂರ ಹೋಗುವಾಗ ಸಂತೋಷಪಡುವುದಿಲ್ಲ. ಸ್ನೇಹಿತ ತನ್ನ ಪ್ರಿಯ ಸ್ನೇಹಿತನಿಂದ ದೂರ ಹೋಗುವಾಗಲೂ ಸಂತೋಷಪಡುವುದಿಲ್ಲ. ನಾವು ಸಂತೋಷಪಡುವುದು ನಮ್ಮ ಶತ್ರು ನಮ್ಮಿಂದ ದೂರ ಹೋದಾಗ ಮಾತ್ರವಾಗಿದೆ. ಇದೇ ರೀತಿ ಒಬ್ಬ ನಿಜವಾದ ಸತ್ಯವಿಶ್ವಾಸಿ ರಮಝಾನ್ ತನ್ನನ್ನು ಬಿಟ್ಟು ಹೋಗುವಾಗ ಸಂತೋಷಪಡಲು ಸಾಧ್ಯವಿಲ್ಲ. ಅನುಗ್ರಹಗಳು ತಮ್ಮನ್ನು ಬಿಟ್ಟಗಲುವಾಗ ಯಾರೂ ಸಂತೋಷಪಡಲಾರರು. ಅನುಗ್ರಹ ಬಿಟ್ಟು ಹೋಗುವಾಗ ಸಂತೋಷಪಡುವವನು ಯಾರು? ಅನುಗ್ರಹ ಬಿಟ್ಟು ಹೋಗುವಾಗ ಸಂತೋಷಪಡುವವನನ್ನು ದುರದೃಷ್ಟಶಾಲಿ ಎಂದೇ ಹೇಳಬೇಕಲ್ಲದೆ ಬೇರೆ ಏನು ಹೇಳಲು ಸಾಧ್ಯ.? ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನು ಹೀಗೆ ಪ್ರಾರ್ಥಿಸಬೇಕು– ಅಲ್ಲಾಹನು

ನಮ್ಮನ್ನು ಅದರೊಂದಿಗೆ ಯಾವಾಗಲು ಜೋಡಿಸಿಟ್ಟಿರಲಿ. ನಮ್ಮ ಜೀವಿತದ ಯಾವುದೇ ಘಳಿಗೆ ರಮಝಾನಿನ ಅನುಗ್ರಹದಿಂದ ಬೇರೆಯಾಗದಿರಲಿ ಎಂದು ನಾವು ಪ್ರಾರ್ಥಿಸಬೇಕು.

ರಮಝಾನ್ ಎಂದರೇನು ಎನ್ನುವುದರ ಬಗ್ಗೆ ಯಾವಾಗಲೂ ಚಿಂತಿಸುತ್ತಾ ಇರಬೇಕು. ರಮಝಾನ್ ಬಗ್ಗೆ ಅಲ್ಲಾಹನು ನಮಗೆ ತಿಳಿಸಿರುವುದೇನೆಂದರೆ شَهْرُ رَمَضَانَ الَّذِي أُنزِلَ فِيهِ الْقُرْآن ***ಶಹ್‌ರು ರಮಝಾನಲ್ಲಝೀ ಉನ್‌ಝಿಲ ಫೀಹಿಲ್ ಖುರ್‌ಆನ್*** ಪವಿತ್ರ ಖುರ್‌ಆನ್ ಅವತೀರ್ಣಗೊಂಡ ಅನುಗ್ರಹ ಭರಿತ ದಿನಗಳು ರಮಝಾನ್ ಎಂದು ಕರೆಯಲ್ಪಡುತ್ತದೆ. ಪವಿತ್ರ ಖುರ್‌ಆನ್ ಅವತೀರ್ಣವಾಗುವುದು ನಿಂತು ಹೋದರೆ ಮತ್ತೆ ಆ ದಿನಗಳು ಅನುಗ್ರಹಭರಿತವಾಗಿರಲಾರವು. ಆಗ, ಅವು ಅನಿಷ್ಟ ದಿನಗಳಾಗುವುವು. ಆದುದರಿಂದ ಸತ್ಯವಿಶ್ವಾಸಿಗಳಿಗೆ ಕಡ್ಡಾಯವಾಗಿರುವುದೇನೆಂದರೆ ಈ ದಿನಗಳಲ್ಲಿ ಪವಿತ್ರ ಖುರ್‌ಆನ್ ಓದಲು ಮತ್ತು ಕಲಿಯಲು ಶ್ರದ್ಧೆ ವಹಿಸಿದ ಹಾಗೆ ಅದನ್ನು ವರ್ಷವಿಡೀ ನಮ್ಮ ಜೀವನದ ಭಾಗವನ್ನಾಗಿ ಮಾಡುತ್ತಾ ಇರಬೇಕು. ವರ್ಷವಿಡೀ ಪವಿತ್ರ ಖುರ್‌ಆನ್ ಓದುವ ಬಗ್ಗೆ ಶ್ರದ್ಧೆ ನೀಡಬೇಕು. ವರ್ಷವಿಡೀ ಪವಿತ್ರ ಖುರ್‌ಆನನ್ನು ಅನುಸರಿಸಿ ವರ್ತಿಸಲು ಪ್ರಯತ್ನಿಸಬೇಕು. ನಾವು ಪವಿತ್ರ ಖುರ್‌ಆನನ್ನು ನಮ್ಮ ಜೀವನದ ಭಾಗವನ್ನಾಗಿ ಮಾಡಿದಾಗ ಮಾತ್ರ ಪವಿತ್ರ ಖುರ್‌ಆನ್ ಅವತೀರ್ಣಗೊಂಡುದರ ವಾಸ್ತವಿಕ ಉದ್ದೇಶ ಈಡೇರುವುದು. ನಾವು ಅದನ್ನು ನಮ್ಮ ಹೃದಯಗಳಿಗೆ ಇಳಿಸಿ ಅದನ್ನು ನಮ್ಮ ಹೃದಯಗಳಲ್ಲಿ ಸಂರಕ್ಷಿಸಬೇಕು. ಹಾಗೆ ಮಾಡಿದರೆ ನಮ್ಮ ಜೀವನದ ಪ್ರತಿಯೊಂದು ತಿರುವಿನಲ್ಲೂ ಅದರಿಂದ ನಾವು ಅನುಗ್ರಹ ಗಳಿಸಬಲ್ಲೆವು.

ನಾನು ನಿಮ್ಮೊಂದಿಗೆ ಹೇಳಿದ ಈ ಎರಡು ವಿಷಯಗಳ ಬಗ್ಗೆ ನಮ್ಮ ಲಕ್ಷ್ಯ ಯಾವಾಗಲೂ ಇರುವಂತೆ ಅಲ್ಲಾಹನು ಅನುಗ್ರಹಿಸಲಿ. ನಾವು ಅದರ ವಾಸ್ತವಿಕತೆಯನ್ನು ಅರಿಯುವವರಾಗೋಣ. ನಮ್ಮ **ಲೈಲತುಲ್ ಖದ್‌ರ್** ನಮ್ಮನ್ನು ವಿಜಯದ ಉನ್ನತ ಶೃಂಗಕ್ಕೆ ಒಯ್ಯುತ್ತಿರಲಿ. ಅದರ ವಾಸ್ತವಿಕ ಅರಿವು ನಾವು ಗಳಿಸುವಂತಾಗಲಿ. ರಮಝಾನ್ ತಿಂಗಳ ಕೊನೆಯ ಈ ಜುಮುಅವನ್ನು **ಜುಮುಅತುಲ್ ವಿದಾ** ಎಂದು ಹೇಳಬಾರದು. ಇದು ಈ ತಿಂಗಳ ಕೊನೆಯ ಜುಮುಅ ಎಂಬುದು ಸರಿ. ಆದರೆ, ಈ ಜುಮುಅ ರಮಝಾನಿನ ಅನುಗ್ರಹಗಳು ನಮ್ಮನ್ನು ಬಿಟ್ಟು ಹೋಗುವುದಾಗಿ ಮಾಡಬಾರದು. ರಮಝಾನಿನ ಅನುಗ್ರಹ ನಮ್ಮ ಜೀವನದ ಭಾಗವಾಗಲಿ. ಪವಿತ್ರ ಖುರ್‌ಆನಿನ ಅವತೀರ್ಣದ ಉದ್ದೇಶಗಳನ್ನು ನಾವು ಈಡೇರಿಸುವವರಾಗಲಿ.

ಇದರ ಮೊದಲು ಸಹ ಪಾಲೆಸ್ತೀನಿನ ಮುಸ್ಲಿಮರ ಸ್ಥಿತಿಯ ಬಗ್ಗೆ ನಾನು ಪ್ರಸ್ತಾಪಿಸಿದ್ದೆನು. ನಿಮ್ಮ ಪ್ರಾರ್ಥನೆಗಳಲ್ಲಿ ವಿಶಿಷ್ಟವಾಗಿ ಅವರನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಅಲ್ಲಾಹನು ಅವರಿಗೆ ನೆಮ್ಮದಿಯನ್ನು ದಯಪಾಲಿಸಲಿ. ಅವರನ್ನು ಈ ಕಷ್ಟಗಳಿಂದ ಹೊರಗೆ ತರಲಿ.

ಜುಮುಅ ನಮಾಝ್ ನಂತರ ನಾನು ಒಂದು ನಮಾಝೆ ಜನಾಝ ಗಾಯಿಬ್ ಸಹ ಅನಿಷ್ಠಿಸುವೆನು. ಕಿರ್ಗಿಸ್ತಾನದ ನಯೀಮುಲ್ಲಾ ಖಾನ್ ಸಾಹೇಬ್ ಜುಲಾಯಿ 21ನೆ ದಿನಾಂಕ ಹೃದಯ ಸ್ತಂಭನ ಕಾರಣದಿಂದ 61ನೆ ಪ್ರಾಯದಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವ ಇನ್ನಾಇಲೈಹಿ ರಾಜಿಊನ್** ಅವರಿಗೆ ಮಧ್ಯ ಏಶಿಯಾದ ಜಮಾಅತ್‌ಗಳಲ್ಲಿ ಮತ್ತು ವಿಶಿಷ್ಟವಾಗಿ ಕಿರ್ಗಿಸ್ತಾನದಲ್ಲಿ ಜಮಾಅತ್ ಸ್ಥಾಪಿಸಲು ಅಸಾಮಾನ್ಯ ಸೇವೆ ಸಲ್ಲಿಸುವ ಭಾಗ್ಯ ದೊರಕಿದೆ. ಅವರು ಕಿರ್ಗಿಸ್ತಾನದ ನೇಶನಲ್ ಉಪಾಧ್ಯಕ್ಷರಾಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರ)ರವರು ಅಲ್ಲಿಗೆ ಜನರು ತಬ್ಲೀಗಿಗೆ ಹೋಗಲು ಉಪದೇಶಿಸಿದಾಗ ಅವರು ಅಲ್ಲಿಗೆ ಹೋದರು. ಅವರು ಅಲ್ಲಿ ವ್ಯಾಪಾರದ ಉದ್ದೇಶದಿಂದ ಹೋದರೂ ಅಲ್ಲಿ ಧಾರ್ಮಿಕ ಸೇವೆ ಮಾಡಿದರು. ಜಮಾಅತಿನ ಕೆಲಸಗಳಲ್ಲಿ ಅವರು ಯಾವಾಗಲೂ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಅವರು ತಮ್ಮ ಸ್ವಂತ ಕೆಲಸಗಳಿಗಿಂತ ಜಮಾಅತಿನ ಕೆಲಸಕ್ಕೆ ಆದ್ಯತೆ ನೀಡುತ್ತಿದ್ದರು. ಅಲ್ಲಿ ಅನಾನುಕೂಲ ಪರಿಸ್ಥಿತಿ ಇದ್ದರೂ ತಮ್ಮ ಕೊನೆಯುಸಿರು ತನಕ ಅವರು ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದರು. ನಮಾಝ್‌ಗಳಲ್ಲಿ ತಹಜ್ಜುದ್‌ನಲ್ಲಿ ನಿಷ್ಠಾವಂತರಾಗಿದ್ದರು. ದಾನಧರ್ಮ ಮಾಡುವವರೂ ಚಂದಗಳನ್ನು ನೀಡುವುದರಲ್ಲಿ ಉತ್ಸಾಹಭರಿತರೂ ಆಗಿದ್ದರು. ಖಿಲಾಫತ್ ಬಗ್ಗೆ ಪ್ರೀತಿಯ ಸಂಬಂಧ ಹೊಂದಿದ್ದರು. ಅಲ್ಲಿಗೆ ಬೇಟಿ ನೀಡುವ ಮುಬಲ್ಲಿಗರಿಗೆ ಏನಾದರೂ ಕಷ್ಟ ಉಂಟಾದಾಗ ಅವುಗಳನ್ನು ನಿವಾರಿಸಲು ಬಹಳ ಶ್ರದ್ಧೆ ವಹಿಸುತ್ತಿದ್ದರು. ಕೇಂದ್ರದ ಅತಿಥಿಗಳನ್ನು ಬಹಳ ಆದರದಿಂದ ಸತ್ಕರಿಸುತ್ತಿದ್ದರು. ಆ ಪ್ರದೇಶಗಳಲ್ಲಿ ಕೆಲಸ ಮಾಡಿದ ಮತ್ತು ಮಾಡುತ್ತಿರುವ ಮುಬಲ್ಲಿಗರೆಲ್ಲರೂ ಹೇಳುವುದೇನೆಂದರೆ ಅವರು ಜಮಾಅತ್ ಬಗ್ಗೆ ಅಸಾಧಾರಣ ಅಭಿಮಾನ ಹೊಂದಿದವರಾಗಿದ್ದರು ಎಂದು. ಕಿರ್ಗಿಸ್ತಾನದ ಮಿಶನ್ ಹೌಸ್ ಖರೀದಿಸುವಾಗ ಅದರಲ್ಲಿ ಅವರು ಬಹಳ ಮುಖ್ಯ ಪಾತ್ರ ವಹಿಸಿದ್ದರು. ಅವರು ಮೂಸೀ ಸಹ ಆಗಿದ್ದರು.

ಅಲ್ಲಾಹನು ಅವರ ಮೇಲೆ ದಯೆದೋರಿ ಮಗ್‌ಫಿರತ್‌ನಿಂದ ವರ್ತಿಸುವವನಾಗಲಿ. ಅವರ ಪತ್ನಿ ಮತ್ತು ಮಕ್ಕಳಿಗೆ ಅಲ್ಲಾಹನು ನೆರವು ನೀಡುವವನಾಗಲಿ. ಅವರನ್ನು ಜಮಾಅತ್‌ನೊಂದಿಗೆ ಮತ್ತು ಖಿಲಾಫತ್‌ನೊಂದಿಗೆ ಯಾವಾಗಲೂ ಸಂಬಂಧವಿರಿಸುವವರನ್ನಾಗಿ ಮಾಡಲಿ. ಅವರು ಜಾರಿಗೊಳಿಸಿದ ಸತ್ಕರ್ಮಗಳನ್ನು ಮುಂದುವರಿಸುವ ಭಾಗ್ಯ ಅವರಿಗೆ ದೊರಕುವಂತಾಗಲಿ– ಆಮೀನ್.

**---------------*****---------------**

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 25-07-2014*

***Kannada Translation:*** M Ubeidullah

***Reviewed by:*** M P Ibrahim | ***Typing:*** U Basheer Ahmad

*Published By: **Kannada Khutuba Desk** (comes under the **Kannada Isha'at Team**)*

*Ahmadiyya Muslim Jama`at, Karnataka*

*Email*: **khutuba.kannada@gmail.com**